# ಸ್ಫೂರ್ತಿ ನೀಡಬಲ್ಲ ವಿವೇಕಾನಂದರ ತತ್ತ್ವಗಳು

ರಾಘವೇಂದ್ರ ಸಿ. ಎಸ್.

ಸ್ವಾಮಿ ವಿವೇಕಾನಂದರ ಒಂದೊಂದು ನುಡಿಯೂ ಶಕ್ತಿಯ ಕಿಡಿಗಳು; ಅಪಾರ ಸತ್ತ್ವಶಾಲಿ, ಪ್ರೇರಕ ಅಮೃತಬಿಂದುಗಳು. ವಿಶೇಷವಾಗಿ ಯುವಜನತೆಗೆ ಉಪಯುಕ್ತವಾದ ಈ ಬೋಧನೆಗಳ ಮಹಿಮೆಯನ್ನಿಲ್ಲಿ ವಿವರಿಸಲಾಗಿದೆ. ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತದ್ದಾರೆ.

ಸಿಡಿಲ ಸಂತ, ಶತಮಾನದ ಸಂತ, ವಿಶ್ವದ ದೊಡ್ಡಣ್ಣ ಎಂದೇ ಕರೆಸಿಕೊಂಡ ನಾಡಿನಲ್ಲಿ ನಮ್ಮ ಭಾರತೀಯತೆಯ ಭವ್ಯ ದರ್ಶನ ಮಾಡಿಸಿ ಪ್ರತಿಯೊಬ್ಬರಲ್ಲೂ ದೇಶಭಕ್ತಿಯನ್ನು ಬಡಿದೆಬ್ಬಿಸಿದ ಅಪ್ರತಿಮ ವೀರ ಸೇನಾನಿ - ಸ್ವಾಮಿ ವಿವೇಕಾನಂದರು. ಅವರು ಬದುಕಿದ್ದು ಕೆಲವೇ ವರ್ಷಗಳಾದರೂ, ಯುಗ ಕಳೆದರೂ ಯುಗಾಂತರದ ಯುಗಪುರುಷ. ಕಾಲದ ಮರೆಯಲ್ಲಿ ಮಾಸಿ ಹೋಗದೆ ಎಲ್ಲರ ಮನಗಳು ನೆನಪಿಡಬಹುದಾದ ಸಂದೇಶಗಳನ್ನು ಯುವಜನಾಂಗಕ್ಕೆ ಬಳುವಳಿಯಾಗಿ ಕೊಟ್ಟು, ದೇಶ ಮರೆಯಲಾಗದ ಸ್ಫೂರ್ತಿಯ ಚಿಲುಮೆಯಾಗಿದ್ದವರು. ಅವರ ಬದುಕೇ ಒಂದು ಸ್ಫೂರ್ತಿಯ ಚಿಲುಮೆ, ಎಂತಹ ಬಲಹೀನನನ್ನೂ ಬಲಶಾಲಿಯನ್ನಾಗಿ ಮಾಡಬಲ್ಲದು. ಈ ಎಲ್ಲಾ ಕಾರಣಗಳಿಂದಲೇ ಅವರ ಜನುಮದಿನವನ್ನು ಇಡೀ ದೇಶವೇ ರಾಷ್ಟ್ರೀಯ ಯುವ ದಿನವನ್ನಾಗಿ ಆಚರಿಸಿ, ಯುವಕರಿಗೆ, ''ಏಳಿ! ಎದ್ದೇಳಿ! ಗುರಿ ಮುಟ್ಟುವ ತನಕ ನಿಲ್ಲದಿರಿ'' ಎಂದು ಎಚ್ಚರಿಸುವ ಕರೆ ನೀಡಲಾಗುತ್ತದೆ.

ಸ್ವಾಮಿ ವಿವೇಕಾನಂದರು ಯುವಜನಾಂಗಕ್ಕೆ ಸಾರಿದ ಸಂದೇಶಗಳು ಕೇವಲ ಆ ಕಾಲಕ್ಕೆ ಮಾತ್ರವಲ್ಲದೆ, ಅಂದಿಗೂ, ಇಂದಿಗೂ, ಮುಂದಿನ ದಿನಮಾನಗಳಿಗೂ ಮಾತ್ರವಲ್ಲದೆ ಸೂರ್ಯ-ಚಂದ್ರ-ಆಕಾಶ-ನಕ್ಷತ್ರ ಬದುಕಿರುವವರೆಗೂ ಅನುಸರಣೀಯವಾಗಿ ಆದರ್ಶವಾಗಿರಬಲ್ಲವು. ಅವರ ಸಿದ್ಧಾಂತಗಳಲ್ಲಿ ಪ್ರಮುಖ ಹಾಗೂ ಗಣ್ಯವಾದ ಕೆಲವು ತತ್ತ್ವ- ಸಿದ್ಧಾಂತಗಳು ಪ್ರಸ್ತುತ ದಿನಗಳಲ್ಲಿ ಯುವಜನಾಂಗಕ್ಕೆ ಹೇಗೆ ಮಾರ್ಗದರ್ಶಕವಾಗಬಲ್ಲವು ಎಂಬುದನ್ನು ಇಲ್ಲಿ ನಿರೂಪಿಸಲಾಗಿದೆ.

## ಸ್ವಾಮಿ ವಿವೇಕಾನಂದರ ಸಿದ್ಧಾಂತಗಳು

**೧. ನಿನ್ನ ಏಳಿಗೆಗೆ ನೀನೇ ಶಿಲ್ಪಿ :** ಸ್ವಾಮಿ ವಿವೇಕಾನಂದರು ಯುವಜನತೆಗೆ ಕೊಟ್ಟ ಪ್ರಸಿದ್ಧ ಸಂದೇಶ ಇದಾಗಿದೆ. ಸರ್ವಕಾಲದಲ್ಲಿಯೂ ಪ್ರತಿಯೊಬ್ಬನಲ್ಲಿಯೂ ಸ್ಫೂರ್ತಿ ನೀಡಬಲ್ಲ ನುಡಿ ಇದಾಗಿದೆ. ಒಬ್ಬ ವ್ಯಕ್ತಿ ಉದ್ಧಾರವಾಗಲು ಅಥವಾ ಹಾಳಾಗಲು



ಮತ್ತೊಬ್ಬ ವ್ಯಕ್ತಿ ಕಾರಣವಾಗಲಾರನು. ನಮ್ಮಲ್ಲಿ ಕೆಲವು ಪೋಷಕರ ಸಾಮಾನ್ಯ ನುಡಿ ಪ್ರಚಲಿತದಲ್ಲಿದೆ - 'ನಮ್ಮ ಮಗ ಒಳ್ಳೆಯವನೇ, ಆ ಹುಡುಗನ ಸಹವಾಸ ಮಾಡಿ ಹಾಳಾದ' ಎಂದು

ಹೇಳಬಲ್ಲ. ಜನರಿಗಂತೂ ಈ ವಾಕ್ಯ ಹೊಸ ವ್ಯಾಖ್ಯಾನ ಕೊಟ್ಟಂತಿದೆ. ನಾನು ಇಂದು ಏನಾಗಿದ್ದೇನೋ ಅದು ಭೂತಕಾಲದಲ್ಲಿ ಮಾಡಿದ ಕೆಲಸದ ಫಲ, ಇಂದು ಏನು ಮಾಡುವೆನೋ ಅದು ನನ್ನ ಮುಂದಿನ ಭವಿಷ್ಯವನ್ನು ರೂಪಿಸಲು ನಾಂದಿಯಾಗಿರುತ್ತದೆ. ಹಾಗಾಗಿ ನಮ್ಮ ಕಾರ್ಯಗಳನ್ನು ಶ್ರದ್ಧೆಯಿಂದ ಮಾಡಿದ್ದಲ್ಲಿ ತಕ್ಕ ಪ್ರತಿಫಲವನ್ನು ಪಡೆಯಬಲ್ಲೆವು. ಇದನ್ನು ಹೇಳುವಾಗ ಹಿಂದೆ ಎಲ್ಲೋ ಓದಿದ ಅಥವಾ ಕೇಳಿದ ಘಟನೆ ನೆನಪಾಗುತ್ತದೆ.

**ಘಟನೆ :** ಶಿಲ್ಪಿಯೊಬ್ಬ ಒಂದು ಕಲ್ಲಿನಿಂದ ವಿನೂತನವಾದ, ಸುಪ್ರಸಿದ್ಧವಾದ ಮೂರ್ತಿಯೊಂದನ್ನು ಕೆತ್ತಿದನಂತೆ. ಆಗ ಆ ಮೂರ್ತಿಯನ್ನು ನೋಡಿ ಜನರೆಲ್ಲರೂ ಹರ್ಷದಿಂದ ಸಂಭ್ರಮಿಸಿದರಂತೆ. ಜನರ ಸಂಭ್ರಮವನ್ನು ನೋಡಿದ ಮೂರ್ತಿ, ಆ ಶಿಲ್ಪಿಗೆ ತನ್ನ ಬದುಕಿಗೆ ಸಾರ್ಥಕತೆಯನ್ನು ತಂದುಕೊಟ್ಟದ್ದಕ್ಕಾಗಿ ಧನ್ಯವಾದವನ್ನು ಅರ್ಪಿಸಿದಾಗ ಆ ಶಿಲ್ಪಿ, ''ನಾನೇನೂ ವಿಶೇಷವಾದುದನ್ನು ಮಾಡಿಲ್ಲ, ನಿನ್ನಲ್ಲೇ ಅಡಕವಾಗಿದ್ದ ಬೇಡವಾದ ಅಂಶಗಳನ್ನು ಬೇರ್ಪಡಿಸಿದೆ ಅಷ್ಟೇ. ಸುಂದರವಾದ ಪ್ರತಿಮೆ ನೀನೇ ಆಗಿರುವೆ'' ಎಂದನಂತೆ. ಘಟನೆ ಎಷ್ಟು ಅರ್ಥಪೂರ್ಣವಾಗಿದೆ ಅಲ್ಲವೆ! ನಮ್ಮಲ್ಲಿಯೇ ಇರುವ ಗುಣಗಳನ್ನು ಸರಿಪಡಿಸಿಕೊಂಡಲ್ಲಿ ನಾವೇ ಸುಂದರ ವಿಗ್ರಹವಾಗಿ ರೂಪುಗೊಳ್ಳಬಲ್ಲೆವು. ಇದನ್ನೇ ಸ್ವಾಮಿ ವಿವೇಕಾನಂದರು ಹೇಳಿರುವುದು, ನಿನ್ನ ಏಳಿಗೆಗೆ ನೀನೇ ಶಿಲ್ಪಿ ಹೊರತು ಬೇರೆ ಯಾರೂ ಅಲ್ಲ ಎಂದು. ನಮ್ಮಲ್ಲಿಯೇ ಅನಂತವಾದ ಶಕ್ತಿ ಅಡಗಿದೆ, ಅದನ್ನರಿಯುವ ಪ್ರಯತ್ನ ಮಾಡಬೇಕು. ಅದನ್ನು ಬಿಟ್ಟು ಕಾಡಿನಲ್ಲಿ ವಾಸಮಾಡುವ ಕಸ್ತೂರಿ ಮೃಗ ತನ್ನ ಮೈಯಿಂದಲೇ ಸೂಸುವ ಸುಗಂಧ ಪರಿಮಳವನ್ನು ಕಂಡುಹಿಡಿಯಲಾಗದೆ, ಕಾಡಿನಲ್ಲೆಲ್ಲ ಹುಡುಕವಂತಹ ಕೆಲಸವನ್ನು ಮಾಡುವಂತೆ, ಪ್ರಸ್ತುತ ಯುವ ಸಮುದಾಯವು ಎಲ್ಲಿ ಸ್ಫೂರ್ತಿ ಸಿಗುವುದೆಂದು ಹುಡುಕುತ್ತಾ ಸಮಯ ಕಳೆಯುತ್ತದೆ. ಅಗಾಧವಾದ ಶಕ್ತಿ ನಿಮ್ಮಲ್ಲಿಯೇ ಅಡಗಿದೆ ಎಂಬ ಸೂಕ್ಷ್ಮವಾದ ಅರ್ಥವನ್ನು ವಿವೇಕಾನಂದರ ಈ ನುಡಿ ನೀಡುತ್ತದೆ. ಇದನ್ನು ಅರ್ಥಮಾಡಿಕೊಂಡಾಗ ಮಾತ್ರ ಈ ಸಂದೇಶ ಹೃದಯವನ್ನು ಮುಟ್ಟುತ್ತದೆ, ಮನಸ್ಸನ್ನು ಎಚ್ಚರಿಸುತ್ತದೆ.

**೨) ಏಳಿ, ಎದ್ದೇಳಿ ! ಗುರಿ ಮುಟ್ಟುವ ತನಕ ನಿಲ್ಲದಿರಿ !!**

ಯುವಕರಿಗೆ ಸ್ವಾಮಿ ವಿವೇಕಾನಂದರು ಕೊಟ್ಟ ಆದರ್ಶಯುತವಾದ ನುಡಿ ಇದಾಗಿದೆ. ನಿಮ್ಮಲ್ಲಿ ಗುರಿಯೊಂದು ಇರಲಿ, ಆ ಗುರಿಯನ್ನು ಮುಟ್ಟುವ ತನಕ ನಿಮ್ಮ ಪ್ರಯತ್ನ ನಿಲ್ಲಬಾರದೆಂಬ ಸ್ಫೂರ್ತಿದಾಯಕವಾದ ನುಡಿ ಎಲ್ಲಾ ಕಾಲಕ್ಕೂ ಅನ್ವಯವಾಗುವಂತಹದು. ಪ್ರತಿಯೊಬ್ಬ ವ್ಯಕ್ತಿಗೂ ಗುರಿ ಇರಬೇಕು, ಆ ಗುರಿಯೆಡೆಗೆ ಸಾಗುವ ಪ್ರಯತ್ನ ಮಾಡಬೇಕು, ಗುರಿ ತಲುಪುವವರೆಗೂ ಪ್ರಯತ್ನಿಸುತ್ತಲೇ ಇರಬೇಕು. ಕೆಲವೊಮ್ಮೆ ಗುರಿಯನ್ನು ತಲುಪುವ ವೇಳೆಯಲ್ಲಿ ಸೋಲುಗಳುಂಟಾಗಬಹುದು; ನೋವು, ಅಪಮಾನಗಳನ್ನು ಎದುರಿಸಬೇಕಾದ ಸಂದರ್ಭಗಳು ಎದುರಾಗಬಹುದು. ಆದರೆ ಅವುಗಳಿಗೆಲ್ಲಾ ತಲೆಕೆಡಿಸಿಕೊಳ್ಳದೆ ಮುನ್ನುಗ್ಗಬೇಕಾಗುತ್ತದೆ. ಏಕೆಂದರೆ ಪ್ರಸ್ತುತ ದಿನಗಳಲ್ಲಿ ಸಾಧನೆ ಮಾಡಹೊರಟವನಿಗೆ ಬೆಕ್ಕುಗಳಿಗಿಂತ ಜನರೇ ಅಡ್ಡಬರುತ್ತಾರೆ ಎಂದು ಎಲ್ಲೋ ಓದಿದ ಮಾತು ಅಪ್ಪಟ ಸತ್ಯವೆನಿಸುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವಿವೇಕಾನಂದರ ಈ ನುಡಿ, 'ನನ್ನಿಂದ ಏನೂ ಸಾಧ್ಯವಾಗಲಾರದು' ಎಂದು ಕೈಕಟ್ಟಿ ಕುಳಿತವರಿಗೆ ಭರವಸೆಯ ದಿವ್ಯಮಂತ್ರವಾಗಬಲ್ಲುದು. ''ಏಳಿ, ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ'' ಎಂಬ ಸಿದ್ಧಾಂತ ಸರ್ವ ಕಾಲದಲ್ಲಿಯೂ, ಎಂತಹ ನಿರುತ್ಸಾಹಿಯಲ್ಲಿಯೂ ಉತ್ಸಾಹ ತುಂಬಬಹುದಾಗಿದೆ. ಅದು ಮಿಂಚಿನಂತಹ ಪ್ರೇರಣೆ ನೀಡಬಲ್ಲುದು.

**೩. ದೇಶಭಕ್ತರಾಗಿರಿ :** ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶಗಳಿಂದ ಭಾರತಕ್ಕೆ ಮರಳಿ ಬಂದಾಗ ಅವರಿಗೆ ಅಭೂತಪೂರ್ವ ಸ್ವಾಗತ ಸಿಕ್ಕಿತು. ಆಗ ಅಲ್ಲಿದ್ದವರು, ''ಇಷ್ಟು ದಿನ ವಿದೇಶದಲ್ಲಿ ತಂಗಿದ್ದಿರಿ, ಈಗ ಭಾರತಕ್ಕೆ ಬಂದಿರುವಿರಿ, ನಿಮಗೆ ಈ ಕ್ಷಣದಲ್ಲಿ ಭಾರತದ ಬಗ್ಗೆ ಎಂತಹ ಭಾವನೆ ಇದೆ?'' ಎಂದು ಪ್ರಶ್ನಿಸಿದಾಗ – ''ನಾನು ವಿದೇಶಕ್ಕೆ ಹೋಗುವ ಮುನ್ನ ಭಾರತವನ್ನು ಪ್ರೀತಿಸುತ್ತಿದ್ದೆ. ಹೋಗುವಾಗಲೂ, ನನ್ನ ಮನಸ್ಸು ದೇಶಪ್ರೇಮದಲ್ಲಿಯೇ ತೊಯ್ದುಹೋಗಿತ್ತು. ಈಗಂತೂ ನನ್ನ ದೇಶದ ಪ್ರತಿ ಕಣಕಣವನ್ನೂ ಪೂಜಿಸುತ್ತೇನೆ'' ಎಂದು ಉತ್ತರ ನೀಡಿದರಂತೆ. ತನ್ನ ದೇಶದ ಬಗ್ಗೆ ಪೂಜ್ಯಭಾವನೆಯನ್ನು ಬಿತ್ತಿ ಬೆಳೆದು ಮೊಳಕೆ ಒಡೆಯುವಂತೆ ಮಾಡಿದ ಭವ್ಯವಾದ ಸಂದೇಶವಿದು. ಆದರೆ ಇತ್ತೀಚಿನ ದಿನಗಳಲ್ಲಿ ಅನೇಕ ಯುವ ಪ್ರತಿಭೆಗಳು ಹಣದ ವ್ಯಾಮೋಹದಿಂದಲೋ, ಪ್ರತಿಷ್ಠೆಯ ಕಾರಣದಿಂದಲೋ ವಿದೇಶದಲ್ಲಿ ಹೋಗಿ ನೆಲೆಸುವ ಪರಿಪಾಠವನ್ನು ಕಾಣುತ್ತಿದ್ದೇವೆ. ಪ್ರತಿಭೆಗಳೆಲ್ಲಾ ಈ ರೀತಿ ಪಲಾಯನ ಮಾಡಿದ್ದೇ ಆದರೆ ನಮ್ಮ ದೇಶವನ್ನು ಪ್ರೀತಿಸುವ , ಗೌರವಿಸುವ ಕಾರ್ಯವನ್ನು ಯಾರು ಮಾಡಬಲ್ಲರು? ಚಿಂತಿಸಿ. ಇದೇ ಕಳೆದ ಮೂರು-ನಾಲ್ಕು ವರ್ಷಗಳ ಹಿಂದೆ ಕೊರೋನಾ ಎಂಬ ಮಹಾಮಾರಿ ಎಲ್ಲೆಡೆ ಆಕ್ರಮಿಸಿಕೊಂಡಾಗ ರಕ್ಷಣೆಗಾಗಿ ಆಶ್ರಯ ಬಯಸಿ ಬಂದದ್ದು ನಮ್ಮ ದೇಶಕ್ಕೆ ಹೊರತು ವಿದೇಶಕ್ಕಲ್ಲ. ನಮ್ಮ ದೇಶದ ಬಗ್ಗೆ ನಮಗೆ ಪೂಜ್ಯ ಭಾವನೆ ಇರಬೇಕೆಂಬ ಸ್ವಾಮೀಜಿಯವರ ನುಡಿ ಎಲ್ಲಾ ಕಾಲಕ್ಕೂ ಸಲ್ಲುವಂತಹದು.

ಮತ್ತೊಮ್ಮೆ ಸ್ವಾಮೀಜಿ ಈ ಮಾತನ್ನು ಹೇಳುತ್ತಾರೆ – ವಿದೇಶೀಯರಲ್ಲಿ ಒಳ್ಳೆಯ ಅಂಶಗಳಿದ್ದರೆ ಅದನ್ನು ಸ್ವೀಕರಿಸಿ, ಆದರೆ ಅವರನ್ನೇ ಅನುಕರಣೆ ಮಾಡಬೇಡಿ ಎಂದು. ಹೀಗೆ ಹೇಳುವ ಮೂಲಕ ನಮ್ಮತನವನ್ನು ಮರೆಯಬಾರದೆಂಬ ಸೂಚನೆಯನ್ನು ಕೊಡುತ್ತಾರೆ. ಒಳ್ಳೆಯತನಗಳಿದ್ದರೆ ತೆಗೆದುಕೊಳ್ಳೋಣ, ಅದೇ ಸಮಯದಲ್ಲಿ ನಮ್ಮತನವನ್ನು ಕಡೆಗಣಿಸುವ ಪ್ರಯತ್ನ ಮಾಡದಿರೋಣ. ನಮ್ಮ ಸಂಸ್ಕೃತಿ, ಆಚಾರ, ವಿಚಾರಗಳನ್ನು ಬಿಟ್ಟು

ಕೊಡುವ ಅಗತ್ಯವಿಲ್ಲ. ಕೊರೋನಾ ಬಂದಾಗಲೇ ನಮ್ಮ ಭಾರತೀಯ ಸಂಸ್ಕೃತಿಯ ನೈಜ ಅರಿವು ಕೆಲವರಿಗಾದರೂ ಆಗಿರಬಹುದೆಂಬ ನಂಬಿಕೆ ನನಗಿದೆ. ಕೈಮುಗಿದು ನಮಸ್ಕರಿಸುವ, ಹೊರಗಡೆಯಿಂದ ಮನೆಗೆ ಬಂದಾಗ ಕೈ ಕಾಲು ತೊಳೆದು ಮನೆಯೊಳಗೆ ಕಾಲಿಡುವ ಸಂಪ್ರದಾಯ ಇದ್ದದ್ದು ಅದರ ಉದ್ದೇಶದ ಅರಿವು ಆ ವರ್ಷಗಳ ಮಟ್ಟಿಗಾದರೂ ಕೆಲವರಿಗೆ ಆಗಿರಬಹುದು. ನಮ್ಮ ಸಂಸ್ಕೃತಿಯನ್ನು ಕೆಲವು ವಿದೇಶೀಯರೇ ಪಾಲಿಸುತ್ತಾ ಬಂದಿರುವುದು ಇದಕ್ಕೆ ನಿದರ್ಶನ. ಆದರೆ ನಾವು ಬೇರೆಯ ಸಂಸ್ಕೃತಿಯ ಅಂಧಾನುಕರಣೆಯನ್ನು ಮಾಡುತ್ತಾ ನಮ್ಮ ಸಂಸ್ಕೃತಿಯ ಬಗ್ಗೆ ನಿರ್ಲಕ್ಷ್ಯ ವಹಿಸುವುದು ಇಂದಿನ ದುರಂತವೆಂದೇ ಹೇಳಬಹುದು. ಅಂತಹವರಿಗೆ ಸ್ವಾಮಿ ವಿವೇಕಾನಂದರ ಈ ಸಿದ್ಧಾಂತ ಹೊಸ ಅರ್ಥವನ್ನು ನೀಡಿ ಪರಿವರ್ತನೆಯನ್ನು ತರಬಲ್ಲದು.

### ೪. ಯಾವುದನ್ನೂ ಪ್ರಶ್ನಿಸದೆ ಒಪ್ಪಿಕೊಳ್ಳಬೇಡಿ

ಯಾವುದೋ ಗ್ರಂಥದಲ್ಲಿ ಹೇಳಿದೆ , ಯಾರೋ ವಿದ್ವಾಂಸರು ಹೇಳಿದ್ದಾರೆ, ಯಾರೋ ಪ್ರಮುಖ ಗಣ್ಯರು ಹೇಳಿದ್ದಾರೆ ಎಂದು ಅವರ ನುಡಿಗಳನ್ನು , ವಿಚಾರಗಳನ್ನು ನಂಬಬೇಡಿ, ಆಲೋಚಿಸಿ ನಿಮ್ಮ ಅನುಭವಕ್ಕೆ ಬಂದರೆ ಮಾತ್ರ ಅದನ್ನು ನಂಬಿ, ಪ್ರಶ್ನಿಸದೆ, ನಿಮ್ಮ ಅನುಭವಕ್ಕೆ ಬಾರದ ಯಾವುದೇ ವಿಷಯವನ್ನೂ ಅದು ಎಲ್ಲಿಯೇ ಇರಲಿ, ಯಾರೇ ಹೇಳಿರಲಿ ಅದನ್ನು ನಂಬದಿರಿ ಎಂಬ ಆದರ್ಶದ ಸಿದ್ಧಾಂತವನ್ನು ಸ್ವಾಮಿ ವಿವೇಕಾನಂದರು ತಮ್ಮ ಬದುಕಿನುದ್ದಕ್ಕೂ ಅಳವಡಿಸಿಕೊಂಡು ಬಂದಿದ್ದರು. ಅದನ್ನೇ ಅವರು ತಮ್ಮ ಸಂದೇಶಗಳ ಮೂಲಕ ಸಾರಿ ಯುವ ಸಮುದಾಯವನ್ನು ಎಚ್ಚರಿಸುವ ಕೆಲಸವನ್ನು ಮಾಡಿದ್ದಾರೆ.

ಪ್ರಸ್ತುತ ದಿನಗಳಲ್ಲಿ ಯಾರೋ ಸಿನಿಮಾ ನಟನ ಅಭಿಮಾನಿ, ರಾಜಕಾರಣಿಯ ಬೆಂಬಲಿಗ, ಸಾಹಿತಿಯ ಪರಿಪಾಲಕನೆಂದೋ ತಮಗೆ ಇಷ್ಟವಾದವರು ಹೇಳಿದ್ದನ್ನೇ ವೇದವಾಕ್ಯವೆಂದೋ ಪರಿಪಾಲಿಸುವ ಯುವಸಮುದಾಯವನ್ನು ಒಂದು ಕ್ಷಣದ ಮಟ್ಟಿಗಾದರೂ ಆಲೋಚಿಸುವಂತೆ ಮಾಡಬಲ್ಲ ನುಡಿ ಇದಾಗಿದೆ. ಪ್ರಶ್ನಿಸಬೇಕು, ಸಾಧಕ-ಬಾಧಕಗಳನ್ನು ಅರ್ಥ ಮಾಡಿಕೊಂಡು ಅನುಭವಕ್ಕೆ ಬಂದ ನಂತರ ವಿಚಾರಗಳನ್ನು ನಂಬಬೇಕೆಂಬ ಈ ಸಿದ್ಧಾಂತ ನಿಜಕ್ಕೂ ಅನುಕರಣೀಯವಾದುದು.

### ೫. ನಿಮ್ಮಲ್ಲಿ ಶ್ರದ್ಧೆ ಜಾಗೃತವಾಗಿರಲಿ

ಪ್ರತಿಯೊಬ್ಬ ಮನುಷ್ಯನಲ್ಲಿಯೂ ಶ್ರದ್ಧೆ ಇರಬೇಕು. ಶ್ರದ್ಧೆ ಜಾಗೃತವಾಗಿದ್ದರಷ್ಟೇ ಅವನಿಂದ ಏನಾದರೂ ಸಾಧನೆ ಮಾಡಲು ಸಾಧ್ಯವಾಗುವುದು. ಇದನ್ನು ಹೇಳುವಾಗ ಸ್ವಾಮಿ ವಿವೇಕಾನಂದರ ಜೀವನದಲ್ಲಿ ನಡೆದ ಘಟನೆಯೊಂದು ನೆನಪಿಗೆ ಬರುತ್ತದೆ.

**ಕಥೆ :** ಒಮ್ಮೆ ಸ್ವಾಮಿ ವಿವೇಕಾನಂದರು ಕಾಡಿನ ಮಾರ್ಗದಲ್ಲಿ ಬರುವಾಗ ಹಸಿದ ಭಯಂಕರವಾದ ಹುಲಿಯೊಂದು ಎದುರಾಯಿತು. ಆಗ ವಿಚಲಿತರಾಗದ ಸ್ವಾಮೀಜಿ, ಆ ಹುಲಿಗೆ ''ನೀನು ಹಸಿದಿರುವೆ, ನಾನು ಕೂಡ ಹಸಿದಿರುವೆ, ಬಾ ನನ್ನನ್ನು ತಿಂದು ನಿನ್ನ ಹಸಿವನ್ನು ನೀಗಿಸಿಕೊ'' ಎಂದು ಹೇಳಿ ಕಣ್ಣುಮುಚ್ಚಿ ಧ್ಯಾನಾಸಕ್ತರಾದರಂತೆ. ಆ ಹುಲಿ ಸ್ವಾಮೀಜಿಯ ಹತ್ತಿರ ಬಂದು ಏನೂ ಮಾಡದೆ ಹೊರಟುಹೋಯಿತು ಎನ್ನುತ್ತಾರೆ. ಸ್ವಾಮಿ ವಿವೇಕಾನಂದರಿಗಿದ್ದ ಶ್ರದ್ಧೆಗೆ ನಿದರ್ಶನ ಎನ್ನುವಂತೆ ಈ ಕಥೆಯನ್ನು ಹೇಳಲಾಗುತ್ತದೆ. ಮನುಷ್ಯನಿಗೆ ಶ್ರದ್ಧೆ ಎಂಬುದಿದ್ದರೆ ಆತನಿಂದ ಏನು ಬೇಕಾದರೂ ಸಾಧ್ಯವಾಗುವುದು ಎಂಬುದಕ್ಕೆ ಉದಾಹರಣೆಯಾಗಿದೆ ಈ ಕಥೆ.

ಈ ಕಥೆಯನ್ನು ಈಗಿನ ಯುವ ಸಮುದಾಯದವರು ಕೇಳಿದರೆ 'ಇದು ಎಲ್ಲಾದರೂ ಸಾಧ್ಯವಿದೆಯೆ?' ಎಂಬ ಅನುಮಾನವನ್ನು ವ್ಯಕ್ತಪಡಿಸಬಹುದು. ಈ ಕಥೆಯಲ್ಲಿ ಕಂಡುಬರುವ ನೀತಿ ಏನು ಎಂಬುದು ಮುಖ್ಯವಾಗುತ್ತದೆ. ಸಮಸ್ಯೆಗಳೇ ಹುಲಿಯಂತೆ ಕಾಡಿದಾಗ ನಾವು ಸಮಸ್ಯೆಗೆ ಎದುರಾಗಿ ನಿಂತು ಹೋರಾಡುವ ಕೆಲಸವನ್ನು ಮಾಡಬೇಕು, ಆಗ ಸಮಸ್ಯೆ ಖಂಡಿತವಾಗಿ ಪರಿಹಾರವಾಗಬಲ್ಲದು ಎಂಬುದು ನನ್ನ ಭಾವನೆ.

ಸಣ್ಣ ಪುಟ್ಟ ವಿಷಯಗಳಿಗೂ ಆತ್ಮಹತ್ಯೆಯ ದಾರಿ ಹಿಡಿಯುವ, ಸಮಸ್ಯೆಗಳಿಗೆ ಬೆನ್ನು ತಿರುಗಿಸಿ ಓಡುವಂತಹ, ಮಾನಸಿಕ ಖಿನ್ನತೆಗೆ ಒಳಗಾಗುವಂತಹ ಇತ್ತೀಚಿನ ಯುವಜನತೆಗೆ ಭರವಸೆಯ ದಿವ್ಯಚೇತನವನ್ನು ನೀಡಬಲ್ಲ ಸಂದೇಶ ಇದಾಗಿದೆ ಎನ್ನಬಹುದು. ನಮ್ಮ ಬಗ್ಗೆ ಬೇರೆ ಯಾರಿಗೂ ನಂಬಿಕೆ ಇಲ್ಲದಿದ್ದರೂ ತೊಂದರೆ ಇಲ್ಲ ; ನಮಗೆ ನಮ್ಮ ಬಗ್ಗೆ ನಮಗೆ ಶ್ರದ್ಧೆ, ಆತ್ಮವಿಶ್ವಾಸ ಮೊದಲು ಇರಬೇಕು ಎಂಬುದನ್ನು ಈ ನುಡಿ ತಿಳಿಸುತ್ತದೆ.

ಹೇಗೆ ಸಮುದ್ರವನ್ನು ನಮ್ಮ ದೃಷ್ಟಿಗೆ ನಿಲುಕುವಷ್ಟು ನೋಡಿ ಸಂಭ್ರಮಿಸಬಹುದೋ ಹಾಗೆಯೇ ಸಮುದ್ರದಷ್ಟೇ ಆಳವೂ, ಗಂಭೀರವೂ ಆದ ಸ್ವಾಮಿ ವಿವೇಕಾನಂದರ ಜೀವನದ ಸಿದ್ಧಾಂತಗಳನ್ನು ತಿಳಿದು ಸಂಭ್ರಮಿಸಬೇಕು. ಅವುಗಳನ್ನು ತಿಳಿಯಲು ಅಂತರಂಗದ ಕಣ್ಣನ್ನು ತೆರೆಯ ಬೇಕು, ವಿಶಾಲವಾದ ದೃಷ್ಟಿಕೋನವಿರಬೇಕು. ಆಗ ಮಾತ್ರ ಅವರ ಸಿದ್ಧಾಂತಗಳು ಎಲ್ಲಾ ಕಾಲಕ್ಕೂ ಮಾರ್ಗದರ್ಶಕವಾಗಬಲ್ಲುವು. ರವೀಂದ್ರನಾಥ ಠಾಗೋರ್ ಅವರು ಹೇಳುತ್ತಾರೆ: ''ನೀವು ಭಾರತವನ್ನು ತಿಳಿಯಬೇಕೆಂದರೆ ಸ್ವಾಮಿ ವಿವೇಕಾನಂದರ ಸಿದ್ಧಾಂತಗಳನ್ನು, ಅವರ ನುಡಿಗಳನ್ನು ಓದಿ ಅರ್ಥಮಾಡಿಕೊಳ್ಳಿ. ಅಲ್ಲಿ ಯಾವುದೇ ನುಡಿಯೂ ನಕಾರಾತ್ಮಕವಲ್ಲ, ಎಲ್ಲಾವೂ ಸಕಾರಾತ್ಮಕವಾದವುಗಳೇ.'' — ಈ ಮಾತು ಅಕ್ಷರಶಃ ಸತ್ಯವಾದುದು.